# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 189–ಹೊಂಗಸಂದ್ರ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು / ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 02.07.2022 ರಂದು ಬುಧವಾರ ಸಮಯ ಬೆಳ್ಳಿಗೆ 11.00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.189 ಹೊಂಗಸಂದ್ರ ವಾರ್ಡ್ ಕಛೇರಿ, ಬೇಗೂರು ಮುಖ್ಯ ರಸ್ತೆಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

**ಹಾಜರಿದ್ದ ಸಹಾಯಕ ಅಭಿಯಂತರರು/ ಕಾರ್ಯದರ್ಶಿ, ಸದ್ಯಸರುಗಳು, ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀಮತಿ ಮಾಲತಿ | ನೋಡಲ್ ಅಧಿಕಾರಿಗಳು/ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ |
| 2 | ಶ್ರೀ ಮುನಿರಾಜು | ಸದಸ್ಯರು |
| 3 | ಶ್ರೀ ಕೋದಂಡ್ ರೆಡ್ಡಿ | ಸದಸ್ಯರು |
| 4 | ಶ್ರೀ ನಾಗಭೂಷನ್ | ಸದಸ್ಯರು |
| 5 | ಶ್ರೀ ಕುಮಾರ್ | ಸದಸ್ಯರು |
| 6 | ಶ್ರೀ ಕುಲ್ಕರ್ಣಿ | ಸದಸ್ಯರು – ಗೈರು ಹಾಜರು |
| 7 | ಶ್ರೀ ಗಿರೀಶ್. ಎಸ್ | ಸದಸ್ಯರು – ಗೈರು ಹಾಜರು |
| 8 | ಶ್ರೀ ರಾಮಚಂದ್ರ ಟಿ | ಸದಸ್ಯರು – ಗೈರು ಹಾಜರು |
| 9 | ಶ್ರೀ ರೂಪೇಶ್ ಕುಮಾರ್ | ಸದಸ್ಯರು – ಗೈರು ಹಾಜರು |
| 10 | ಶ್ರೀ ತಿರುಮಲೇಶ್ | ಸದಸ್ಯರು – ಗೈರು ಹಾಜರು |
| 11 | ಶ್ರೀ ಬಾಬು ರೆಡ್ಡಿ | ಸದಸ್ಯರು – ಗೈರು ಹಾಜರು |
| 12 | ಶ್ರೀ ಉಮೇಶ್ | ಎ.ಎಸ್.ಐ, ಬೊಮ್ಮನಹಳ್ಳಿ ಪೋಲಿಸ ಠಾಣೆ |
| 13 | ಶ್ರೀ ಹೆಚ್ ವೆಂಕಟೇಶ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ;189 ಹೊಂಗಸಂದ್ರ |
| 14 | ಶ್ರೀ ವಿನೋದ್ ಕುಮಾರ್ ಟಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ;189 ಹೊಂಗಸಂದ್ರ |
| 15 | ಶ್ರೀ ಶಿವಾನಂದ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 16 | ಶ್ರೀ ಮಂಜುನಾಥ್ ಹೆಚ್.ಎಸ್ | ಸ.ಅ ಬೆಸ್ಕಾಂ |
| 17 | ಶ್ರೀ ಸಂತೋಷ್ ಪ್ರಸಾದ್ | AE, BWSSB |
| 18 | ಶ್ರೀ ರಾಮಕೃಷ್ಣ ಆರ್ | ಕಂದಾಯ ಪರಿವೀಕ್ಷಕರು, ವಾರ್ಡ್– 189 |
| 19 | ಶ್ರೀ ಶಿವ ಕುಮಾರ್ ಎಲ್ | ಮಾರ್ಷಲ್, ವಾರ್ಡ್– 189 |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು, ಸದಸ್ಯರುಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಇಂದಿನ ಸಭೆಯಲ್ಲಿ ಚರ್ಚಿಸಲಾಗಿದ್ದು ಹಾಗೂ ವಿವಿಧ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಸದಸ್ಯರು ಆಕ್ಷೇಪಿಸುತ್ತಾ ಸಭೆಯನ್ನು ಅಧ್ಯಕ್ಷರು/ನೋಡಲ್ ಅಧಿಕಾರಿರವರು ಪ್ರಾರಂಭಿಸಿದರು.

- **ಬೆಸ್ಕಾಂ ಮತ್ತು ವಿಧ್ಯುತ್ ಬೀಧಿ ದೀಪ ವಿಭಾಗ.**

1. ಕೃಷ್ಣ ರೆಡ್ಡಿ ಮನೆ ಹತ್ತಿರ ವಿಧ್ಯುತ್ ಕಂಬಗಳನ್ನು ಸ್ಥಳಾಂತರಿಸಲು ಮತ್ತು ಬೆನ್ಜ಼್ ಶೋರೂಂ ಹತ್ತಿರ ಹೊಸದಾಗಿ 3 ವಿಧ್ಯುತ್ ಕಂಬಗಳನ್ನು ಮತ್ತು ಬೀಧಿ ದೀಪಗಳನ್ನು ಅಳವಡಿಸಲು ಹಾಗೂ 7ನೇ ಮುಖ್ಯರಸ್ತೆ ಮತ್ತು ವಿಧ್ಯಾಜ್ಯೋತಿನಗರದಲ್ಲಿ 10 ಹೊಸ ಬೀಧಿ ದೀಪಗಳನ್ನು ಅಳವಡಿಸಲು ಸಮಿತಿಯಲ್ಲಿ ಸದಸ್ಯರುಗಳು ತಿಳಿಸಿದರು ಮತ್ತು ಕಳೆದ ಸಮಿತಿ ಸಭೆಯಲ್ಲಿ ತಿಳಿಸಿರುವ ದೂರನ್ನು ಪರಿಹರಿಸಿರುವುದಿಲ್ಲವೆಂದು ತಿಳಿಸಿದರು.

CS CamScanner

2. ಡಿ.ಪಿ.ಎಸ್ ಸ್ವಿಚ್‌ಗಳನ್ನು ವಾರ್ಡ್‌ನಲ್ಲಿ ಅಳವಡಿಸುವ ಬಗ್ಗೆ ಶ್ರೀ ಕುಮಾರ್ ರವರು ತಿಳಿಸಿದರು ಅದರಂತೆ ನೋಡಲ್ ಅಧಿಕಾರಿಗಳು ಡಿ.ಪಿ.ಎಸ್ ಸ್ವಿಚ್‌ಗಳನ್ನು ಅಳವಡಿಸುವ ಬಗ್ಗೆ ಕ್ರಮಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು .

- **ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ.**

1. ಅಂಜನೇಯ ಸ್ವಾಮಿ ದೇವಸ್ಥಾನದ ಬಳಿ ಬಾಕಿ ಇರುವ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆಂದು ಅಧಿಕಾರಿಗಳು.
2. ಜಿ.ಬಿ ಪಾಳ್ಯ ಮುನಿಯಪ್ಪ ಲೇಔಟ್, 4ನೇ ಮುಖ್ಯರಸ್ತೆಯಲ್ಲಿ ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ ಹಾಗೂ ಕಾಮಗಾರಿಯು ಚಾಲ್ತಿಯಲ್ಲಿರುತ್ತದೆ.
3. ಗುರುಮೂರ್ತಿ ರೆಡ್ಡಿ ಲೇಔಟ್ ಮತ್ತು ಶಾಂತಿ ನಗರದಲ್ಲಿ ನೀರು ನಿಲ್ಲುವುದು ಮತ್ತು ಸ್ಯಾನಿಟರಿಯಲ್ಲಿ ಹೂಳು ತೆಗೆಯುವ ಬಗ್ಗೆ ಶ್ರೀ ಕುಮಾರ್‌ರವರು ತಿಳಿಸಿ ಒಂದು ವಾರದಲ್ಲಿ ಕಮಾಗಾರಿಯನ್ನು ಮುಗಿಸಲು ತಿಳಿಸಿದರು.
4. 7ನೇ ಮುಖ್ಯರಸ್ತೆಯಲ್ಲಿ ಸ್ಯಾನಿಟರಿ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಡಾಂಬರೀಕರಣ ಮಾಡುವ ಬಗ್ಗೆ ಶ್ರೀ ಕುಮಾರ್‌ರವರು ತಿಳಿಸಿದರು.

- **ಎಸ್.ಡಬ್ಲ್ಯೂ.ಡಿ ಇಲಾಖೆ.**

1. ಸಭೆಗೆ ಗೈರು ಹಾಜರಾಗಿದ್ದು ಈ ವಿಷಯದ ಸಂಬಂಧ ಯಾವುದೇ ಚರ್ಚೆಯು ನಡೆದಿರುವುದಿಲ್ಲ.
2. ಹೊಂಗಸಂದ್ರ ವಾರ್ಡಿನ ಮನೆಗಳ ಒಳಚರಂಡಿ ಮತ್ತು ಸ್ಯಾನಿಟರಿ ಸಂಪರ್ಕದ ಬಗ್ಗೆ ಕುರಿತು ಸರ್ವೆ ರಿಪೋರ್ಟ್ ನೀಡಲು ನೋಡಲ್ ಅಧಿಕಾರಿಯವರು ಸಭೆಯಲ್ಲಿ ಸೂಚಿಸದರು ಮತ್ತು ಅನಧಿಕೃತ ಸಂಪರ್ಕ ಹೊಂದಿರುವ ಮನೆಗಳಿಗೆ ನೋಟಿಸ್ ನೀಡಲು ತಿಳಿಸಿದರು.
3. ಸಭೆಯಲ್ಲಿ ಹಾಜರಿರುವ ಸದಸ್ಯರು ಬೃಹತ್ ನೀರುಗಾಲುವೆಯಲ್ಲಿ ಸರಿಯಾಗಿ ಕಾಮಗಾರಿಯನ್ನು ನಡೆಸಿರುವುದಿಲ್ಲವೆಂದು ತಿಳಿಸಿದರು.
4. ಹೂಳು ತೆಗೆಯುವ ಕಾಮಗಾರಿಯನ್ನು ವಾಜ್‌ಪೇಯಿ ಲೇಔಟ್ ಆಕ್ಸ್‌ಫರ್ಡ್ ಕಾಲೇಜಿನಿಂದ ಶುರು ಮಾಡಲು ಶ್ರೀ ನಾಗಭೂಷನ್‌ರವರು ತಿಳಿಸಿದರು.
5. ಹೊಂಗಸಂದ್ರ ಮುಖ್ಯರಸ್ತೆಯಿಂದ ಹಿಂದು ರುಧ್ರಭೂಮಿಯವರೆಗೂ ಮತ್ತು ಇಟ್ಟಿನ ಅಪಾರ್ಟ್‌ಮೆಂಟ್ ವರೆಗೂ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿರುತ್ತದೆಂದು ತಿಳಿಸಿದರು.

- **ಕಾಮಗಾರಿ ಇಲಾಖೆ**

1. ಸಮುಧಾಯ ಭವನದ ಕಾಮಗಾರಿ ಬಗ್ಗೆ ಸಭೆಯಲ್ಲಿ ಸದಸ್ಯರುಗಳು ಚರ್ಚಿಸಿದರು.
2. ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ಸಿಲ್ಟ್ ಮತ್ತು ಟ್ರಾಕ್ಟರ್ ಕಾಮಗಾರಿಯು ಸರಿಯಾಗಿ ನಡೆಯುತ್ತಿಲ್ಲವೆಂದು ಹಾಗೂ ರಸ್ತೆ ಬದಿ ಡೆಬ್ರೀಸ್ ಸರಿಯಾಗಿ ತೆಗೆಯುತ್ತಿಲ್ಲವೆಂದು ಮತ್ತು ಎ.ಪಿ.ಆರ್ ರಸ್ತೆಯ ಕೊನೆಯಲ್ಲಿ ಮತ್ತು ಅಂಬೇಡ್ಕರ್ ಕಾಲೋನಿಯಲ್ಲಿರುವ ಫೆನ್ಸಿಂಗ್‌ನ್ನು ಕಸ ತೆಗೆಯಲು ಮುರುದಿದ್ದು ಅದನ್ನು ಕಮಗಾರಿ ನಡೆದ ನಂತರ ಮುಚ್ಚಿರುವುದಿಲ್ಲ ಆದುದರಿಂದ ಸ್ಥಳೀಯರು ಸದರಿ ಜಾಗದಲ್ಲಿ ಕಸವನ್ನು ಹಾಕ್ಕುತಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ದೂರಿದರು.
3. ಒಂಟಿಮನೆಗಳ ಕುರಿತು ಸದಸ್ಯಾರ ಶ್ರೀ ಮುನಿರಾಜುರವರು ಕೇಳಿದಾಗ, ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಒಟ್ಟು 29 ಮನೆಗಳಿದ್ದು ಈಗಾಗಲೇ 27 ಮನೆಗಳ ಒಟ್ಟು ಮೊತ್ತವನ್ನು ಪಾವತಿಸಿದ್ದು ಕೇವಲ 2 ಮನೆಗಳು ಉಳಿದಿದ್ದು ಸದರಿ ಮನೆಗಳ ಮಾಲಿಕರುಗಳು ಮೃತರಾಗಿದ್ದು ಅವುಗಳ ಮುಂದಿನ ಕ್ರಮಕ್ಕಾಗಿ ಬಿ.ಬಿ.ಎಂ.ಪಿ ಲೀಗಲ್ ಸೆಲ್‌ಗೆ ಕಳುಹಿಸಲಾಗಿರುತ್ತದೆಂದು ತಿಳಿಸಿದರು.

- **ಬೊಮ್ಮನಹಳ್ಳಿ ಪೋಲಿಸ್ ಠಾಣೆ**

1. ಬ್ರಾಂಡ್ ಫ್ಯಾಕ್ಟರಿ ರಸ್ತೆಯ ಹತ್ತಿರ ಅಕ್ರಮ ಚಟುವಟಿಕೆಗಳು ನಡೆಯುತ್ತಿದ್ದು, ಪೋಲಿಸ್ ಬೀಟ್ಸ್ ನಿಯಮಿತವಾಗಿ ನಡೆಸಲು ಮತ್ತು ಸದರಿ ಪ್ರದೇಶಗಳಲ್ಲಿ ಸಿ.ಸಿ ಕ್ಯಾಮರಗಳನ್ನು ಅಳವಡಿಸಲು ಹಾಗೂ ಈಗಾಗಲೇ ಇರುವ ಕ್ಯಾಮರಗಳನ್ನು ರಿಪೇರಿ ಮಾಡಲು ವಾರ್ಡ್ ಕಾರ್ಯದಶಿಗಳು/ನೋಡಲ್ ಅಧಿಕಾರಿಯವರ ಗಮನಕ್ಕೆ ತಂದರು ಅದರಂತೆ ನೋಡಲ್ ಅಧಿಕಾರಿಯವರು ಪಿ.ಎಸ್.ಐ ಬೊಮ್ಮನಹಳ್ಳಿ ರವರಿಗೆ ಸೂಚಿಸಿದರು.

- **ಘನತ್ಯಾಜ್ಯ:-**

1. ವಾರ್ಡ್ ವ್ಯಾಪ್ತಿಯಲ್ಲಿ ಸೊಳ್ಳೆ ಔಷದಿ ಮತ್ತು bleaching powder ಸಿಂಪಡಿಸಿರುವುದಿಲ್ಲವೆಂದು ಹಾಗೂ ವಾರ್ಡ್‌ಗೆ ಬೇಕಾಗಿರುವ ಪರಿಮಾಣ bleaching powder ನ್ನು ನೀಡಬೇಕಾಗಿ ಸದಸ್ಯರು ತಿಳಿಸಿದರು, ಈ ಬಗ್ಗೆ ಕ್ರಮ ವಹಿಸಲಾಗುವುದೆಂದು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿದ್ದರು.

CamScanner

- **ಆರೋಗ್ಯ ಇಲಾಖೆ:**

1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕೋವಿಡ್-19ರ ಪ್ರಯುಕ್ತ ವೈದ್ಯರನ್ನು ನೇಮಿಸಿದ್ದರು, ಕೋವಿಡ್-19 ಇಳಿಕೆಯಾಗಿರುವುದರಿಂದ ವೈದ್ಯರನ್ನು ತಮ್ಮ ಮಾತೃ ಇಲಾಖೆ ಹಿಂದಿರುಗಿಸಿರುತ್ತಾರೆ. ಆದ್ದರಿಂದ ಖಾಯಂ ವೈದ್ಯರು ಇಲ್ಲದೆ ಇರುವುದರಿಂದ ಸ್ಥಳೀಯರಿಗೆ ಮತ್ತು ಸಾರ್ವಜನಿಕರಿಗೆ ಅನಾನೂಕೂಲವಾಗುತ್ತಿದ್ದು, ಆದ್ದರಿಂದ ಖಾಯಂ ವೈದ್ಯರು, ನರ್ಸ್, Lab Technician ಕೊರತೆ ಇದ್ದು, ಇವರನ್ನು ನೇಮಿಸಿಕೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮಾನ್ಯ ನೋಡಲ್ ಅಧಿಕಾರಿಗಳಲ್ಲಿ ಕೋರಿದ್ದು, ಅದರಂತೆ ಮಾನ್ಯ ನೋಡಲ್ ಅಧಿಕಾರಿ ಆರೋಗ್ಯ ವೈದ್ಯಾಧಿಕಾರಿಗಳು ಬೊಮ್ಮನಹಳ್ಳಿ ವಲಯ ರವರಿಗೆ ದೂರವಾಣಿ ಮೂಲಕ ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿದ್ದು, ವೈದ್ಯಾಧಿಕಾರಿಗಳು ಇಂದು ಮಾನ್ಯ ವಿಶೇಷ ಆಯುಕ್ತರು, ಬಿಬಿಎಂಪಿ ರವರು ಕೋವಿಡ್-19 ನಾಲ್ಕನೇ ಅಲೆಯ ಬಗ್ಗೆ ಹಾಗೂ ಇತರೆ ವಿಷಯಗಳನ್ನು ಕುರಿತು ಸಭೆಯ ಕರೆದಿದ್ದಾರೆ ಸಭೆಯಲ್ಲಿ ಚರ್ಚಿಸಿದ ನಂತರ ತಮಗೆ ಮಾಹಿತಿ ನೀಡಲಾಗುವುದೆಂದು ಮಾನ್ಯ ನೋಡಲ್ ಅಧಿಕಾರಿಗಳಿಗೆ ತಿಳಿಸಿರುತ್ತಾರೆ.
2. ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಪ್ರಕರಣಗಳು ಇಲ್ಲಿಯವರೆಗೆ ಯಾವುದು ಕಂಡುಬಂದಿರುವುದಿಲ್ಲ, 12-14ನೇ ವರ್ಷದವರೆಗೆ ವ್ಯಾಕ್ಸಿನ್ ನೀಡಲಾಗುತಿದ್ದು, 60 ವರ್ಷದವರಿಗೆ ಬೂಸ್ಟರ್ ನೀಡಲಾಗಿರುತ್ತದೆ.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯಲ್ಲಿ ಮಾನ್ಯ ಅಧ್ಯಕ್ಷಕರು/ನೋಡಲ್ ಅಧಿಕಾರಿಗಳ ಉಪಸ್ಥಿಯಲ್ಲಿ ಕಾರ್ಯದರ್ಶಿಗಳು/ಸಹಾಯಕ ಅಭಿಯಂತರರು ರವರು ವಾರ್ಡ್ ಸಮಿತಿ ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು/ ನೋಡಲ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರು, ಬೃಹತ್
ಬೃಹತ್

ನೀರುಗಾಲುವೆ
ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ.
7) ಕಾರ್ಯಪಾಲಕ ಅಭಿಯಂತರರು (ಬೊಮ್ಮನಹಳ್ಳಿ ವಿಭಾಗ) ರವರ ಅವಗಾಹನೆಗಾಗಿ ಸಲ್ಲಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೊಮ್ಮನಹಳ್ಳಿ ಉಪ-ವಿಭಾಗ) ರವರ ಅವಗಾಹನೆಗಾಗಿ ಸಲ್ಲಿಸಿದೆ.
9) ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
10) ಕಛೇರಿ ಪ್ರತಿ.

CamScanner